ಹುಡುಗಿಯನ್ನು ಅರಿಯದೆ, ಅವಳು ಕಾಣದಾದಾಗ ಇದೆಂಥ ವಿಷಾದಮಯ ಕಾತರ– ಕಳವಳ– ತುಡಿತ! ಹುಡುಗಿ ತನ್ನ ಋಜುತನದ ನಡವಳಿಕೆಯಿಂದ ಅವ್ಯಕ್ತವಾಗಿ ಒಳಸೇರಿ ಗೂಡುಕಟ್ಟಿಕೊಂಡು ಬಿಟ್ಟಳೆ!?

ಶ್ರೀರಾಮೇಗೌಡರಿಗೆ ಯಾಕೋ ಇದು ಸಾಕು ಅನಿಸಿತು. ಅವರು ಈಗ ಮಳೆ ನಿಂತ ಮೇಲೆ ಕೆಳಗಿಳಿಯಲೋ ಬೇಡವೋ ಎಂಬ ಪರಿಯ ಮರದ ಹನಿಯಂತೆ ತಮ್ಮ ಮನೆ ಕಡೆಗೆ ಹೆಜ್ಜೆ ಹಾಕತೊಡಗಿದರು.

ಅಪಾರ್ಟ್‌ಮೆಂಟಿನ ನಾಲ್ಕನೆ ಮಹಡಿಯೇರಿ ಒಳಬಂದಾಗ ಸುಶೀಲಮ್ಮ ರಾತ್ರಿ ಊಟಕ್ಕೆ ಅಣಿ ಮಾಡುತ್ತಿದ್ದರು. ವಾಕಿಂಗ್ ಮುಗಿಸಿ ಟೀ ಸ್ಟಾಲಿಗೆ ಹೋಗಿ ತಾವು ಮತ್ತು ವಾಸುದೇವಯ್ಯ ಬೈಟು ಕಾಫಿ ಕುಡಿದು ಬರುವುದು ರೂಢಿ. ಈಗ ಈ ರೂಢಿಯ ತಂತು ಕಳಚಿಕೊಂಡಿತ್ತು. ಸುಶೀಲಮ್ಮ ಸೊರಗಿ ಬಂದ ಗಂಡನಿಗೆ ಕಾಫಿ ಕೊಡಲೇ ಅಂದರು. ಶ್ರೀರಾಮೇಗೌಡರು ಬೇಡ ಅಂದರು. ಒಗ್ಗರಣೆಪುರಿ ಇದೆ ಕೊಡಲೆ ಅಂದರು. ಬೇಡ ಅಂದರು. ಆಪಲ್ ಕಟ್ ಮಾಡಿ ಕೊಡಲೆ ಅಂದರು. ಬೇಡ ಅಂದರು. ಬಿಸಿ ನೀರು ಕೊಡಲೆ ಅಂದರು. ಬೇಡ ಅಂದರು. ಸುಶೀಲಮ್ಮನಿಗೆ ಸಾಕಾಯಿತು. ಚಪಾತಿಗೆ ಪಲ್ಯ ಮಾಡ್ತೀನಿ ಅಂದವರು ಒಳಹೋದರು. ಶ್ರೀರಾಮೇಗೌಡರು ರೂಮಿಗೆ ಬಂದು ಸೇರಿಕೊಂಡರು.

ಶ್ರೀರಾಮೇಗೌಡರು ವಾಕಿಂಗ್ ಮುಗಿಸಿಕೊಂಡು ಬಂದ ಮೇಲೆ ಬಟ್ಟೆ ಬದಲಿಸಿ ಕೈಕಾಲು, ಮುಖ ತೊಳಕೊಂಡು ಫ್ರೀಯಾಗುವುದು ರೂಢಿ. ಆದರೆ ಇವತ್ತು ಅದ್ಯಾವುದನ್ನೂ ಮಾಡದೆ, ಲೈಟನ್ನು ಆನ್ ಮಾಡದೆ ಕತ್ತಲೆಯಲ್ಲಿ ಕೂತಿದ್ದನ್ನು ಗಮನಿಸಿದ ಸುಶೀಲಮ್ಮ ಒಳ ಬಂದು ಲೈಟ್ ಹಾಕಿ 'ಕತ್ತಲೇಲಿ ಕೂತಿದ್ದೀರಲ್ಲ? ಕೊರಗ್ತಾ ಕೂತ್ರೆ ಕಳಕೊಂಡಿದ್ದು ತಿರುಗಿ ಬರುತ್ತಾ? ಆಗೋದು ಆಗ್ತಾ ಇರುತ್ತೆ. ಅದಕ್ಕೆ ಹೊಂದಿಕೊಂಡು ಇರಬೇಕಲ್ವಾ? ಎದ್ದು ಬನ್ನಿ ಯೂಟ್ಯೂಬ್‌ನಲ್ಲಿ ಯಾವುದಾದ್ರು ರಾಜಕುಮಾರ್ ಸಿನಿಮಾ ಹಾಕ್ಕೊಳ್ಳಿ ಅದು ನಿಮಗೆ ಇಷ್ಟ ಅಲ್ವಾ?' ಅಂತ ಹೇಳಿ ಸ್ಟೌವ್ ಮೇಲೆ ನೀರಿಟ್ಟಿದ್ದೆ ಅನ್ನುತ್ತ ಒಳ ಹೋದರು.



ಶ್ರೀರಾಮೇಗೌಡರು ಹೈಸ್ಕೂಲ್ ಹೆಡ್ಮಾಸ್ಟ್ರಾಗಿ ನಿವೃತ್ತಿ ಹೊಂದಿದವರು. ಯಾವುದೇ ವಿಷಯವನ್ನು ವಾಸುದೇವಯ್ಯನವರ ಜೊತೆ ಹೇಗೋ ಹಾಗೆ ಹೆಂಡತಿಯ ಜೊತೆಯೂ ಚರ್ಚಿಸುತ್ತಿದ್ದರು. ಇಂದು ಚರ್ಚೆಗೆ ಇಳಿಯಲಿಲ್ಲ. ಹೆಂಡತಿ ಹೇಳಿದ್ದರಲ್ಲಿ ತಪ್ಪೇನಿದೆ?

ಅವರೀಗ ಎದ್ದು ನಿತ್ಯಕರ್ಮ ಮುಗಿಸಿ ರಾಜಕುಮಾರ್ ನಟಿಸಿರುವ 'ಬಂಗಾರದ ಮನುಷ್ಯ' ಸಿನಿಮಾ ಹಾಕಿಕೊಂಡು ಕೂತರು.

ಅಂದ ಹಾಗೆ, ಈಗ ಶ್ರೀರಾಮೇಗೌಡರು ತಿರುಗಿ ವಾಕಿಂಗ್ ಶುರು ಮಾಡಿದ್ದಾರೆ. ಈಗ ನಡಿಗೆದಾರರೂ ಜೊತೆಗಿದ್ದಾರೆ. ಅವರೊಂದಿಗೆ ಅದೇ ವಾಕಿಂಗ್. ಅಷ್ಟೇ ರೌಂಡ್ಸ್. ಆದರೆ ಹುಡುಗಿ ಸಿಗಬಹುದೇ ಎಂಬ ನಿರೀಕ್ಷೆ ಅವರಿಗೆ ಬತ್ತಿಲ್ಲ.

ಮೊನ್ನೆ ಸಂಜೆಹೊತ್ತು ಜೊತೆಗಾರರ ಕೂಡಿ ಹೋಗುತ್ತಿರಬೇಕಾದರೆ, ಬಂಗಲೆ ಮುಂದಿನ ಗುಡಿಸಲ ಬಳಿ ನಿಂತಿದ್ದ ಕಾವಲುಗಾರ ಎದುರಾದ. ನಮಸ್ಕಾರ ಸ್ವಾಮಿ ಅಂದ. ಶ್ರೀರಾಮೇಗೌಡರ ಪ್ರತಿ ನಮಸ್ಕಾರಕ್ಕೆ ಅವನು ಹುರುಪುಗೊಂಡು 'ಎಲ್ಲಿಂದಲೋ ಬಂದ ಹುಡುಗಿ ಸ್ವಾಮಿ, ಅದ್ರ ಗುರ್ತು ಸಿಗಲಿಲ್ಲ. ಏನೇ ಆಗ್ಲಿ ಒಳ್ಳೆ ಮಗಾ ಸ್ವಾಮಿ. ನಮಗೂ ಒಂದೊಂದು ದಿನ ಒಲೆಗೆ ಕಡ್ಡಿ ಪುಳ್ಳೆ ತಂದುಕೊಟ್ಟು ಹೋಯ್ತಿತ್ತು. ಗುರ್ತು ಪರಿಚಯ ಏನೂ ಇರಲಿಲ್ಲ. ಆದ್ರೂ ನಮ್ದು ತಮ್ದು ಅನ್ನೊ ಅದರ ಭಾವುಣ್ಕೆ ನೋಡಿ... ಅಂದಂಗೆ ನಮ್ಮಣ್ಣನ ಮಗಳು ತಬ್ಲಿ ಮಗಾ ಅದೆ ಅಂತ ಹೇಳಿದ್ನಲ್ಲಾ. ಅದನ್ನ ಇಲ್ಗೇ ಕರೆಸ್ಕೊಂಡು ಇಸ್ಕೂಲ್ಗೆ ಸೇರಿಸ್ಬೇಕು ಅಂದ್ಕೊಂಡಿದ್ದೀನಿ ಸ್ವಾಮಿ...'

ಶ್ರೀರಾಮೇಗೌಡರು ಅವನನ್ನೇ ದುರುದುರು ಗಮನಿಸಿದರು.

ಕಾಲದ ನಡಿಗೆಯ ಹಾದಿಗುಂಟೆ ನಾವು ಊರಿದರೆ ತಾನೆ ಗುರುತು ಕಲ್ಲುಗಳು? ಆತ್ಮೀಯ ಭಾವದಲ್ಲಿ ನಕ್ಕರು! ಹುಡುಗಿ ತಿರುಗಿ ಬರುವುದಿಲ್ಲ. ಆದರೆ ಅವರ ಕಣ್ಣಂಚಿನಲ್ಲಿ ಮಾತ್ರ ಹುಡುಗಿ ಇನ್ನೂ ತಿರುಗಾಡುತ್ತಲೇ ಇದ್ದಾಳೆ. ಹಸಿರು ತುಂಬಿದ ಪಾರ್ಕಿನ ಫುಟ್‌ಪಾತ್ ನುಣ್ಣಗೆ ಇದೆ. ●